**ದಿ: 14-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲು: ಶ್ರೀ ಬಿ.ಎಸ್.ಡಿ. ವಕೀಲರಿಂದ:**

1. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳ ಬಗ್ಗೆ ನನಗೆ ಮಾಹಿತಿ ಇದೆ. ಈ ದಾವೆಯನ್ನು ಅಕ್ಬರ್ ಸಾಬ ಮತ್ತು ಬಂದಿಸಾಬ ಇವರ ಮೇಲೆ ನನ್ನ ಜಮೀನು ಒತ್ತುವರಿಯಾಗಿದೆ ಎಂದು ಸಲ್ಲಿಸಿರುತ್ತೇನೆ. ಜಮೀನು ಒತ್ತುವರಿಯಾಗಿದೆ ಪ್ರತಿವಾದಿಯರ ಕಬ್ಜಾದಲ್ಲಿದೆ. 1ನೇ ಪ್ರತಿವಾದಿ ಹೆಸರಲೇ 2-00 ಎಕರೆ ಹೊಲ ಇದೆ, 2ನೇ ಪ್ರತಿವಾದಿಯ ಹೆಸರಲೇ 1-00 ಎಕರೆ ಹೊಲ ಇದೆ. 1 ಮತ್ತು 2ನೇ ಪ್ರತಿವಾದಿಯರಿಗೆ ಹೊಲ ಹೇಗೆ ಬಂದಿದೆ ಎಂದರೆ ಸಾಕ್ಷಿಯು ಅವರಿಗೆ ನನ್ನ ತಂದೆ ಮತ್ತು ನಾನು 2008 ರಲ್ಲಿ ನೋಂದಣಿ ಕ್ರಯಪತ್ರ ಬರೆದುಕೊಟ್ಟು ಮಾರಾಟ ಮಾಡಿರುತ್ತೇವೆ ಎನ್ನುತ್ತಾರೆ.

2. ನೀವು ಬರೆದುಕೊಟ್ಟ ಕ್ರಯಪತ್ರದಲ್ಲಿ ಎಲ್ಲಾ ವಿಷಯಗಳು ಸರಿಯಾಗಿರುತ್ತವೆ ಎಂದರೆ ಸರಿ. ಖರೀದಿ ಮಾಡಿದ ದಿನಾಂಕದಿಂದ ಇವತ್ತಿನವರೆಗೂ ಪ್ರತಿವಾದಿಯರು ಖರೀದಿ ಮಾಡಿದ ಜಮೀನಿನ ಮಾಲೀಕರು ಮತ್ತು ಕಬ್ಜಾದಾರರು ಆಗಿರುತ್ತಾರೆ ಎಂದರೆ ಸರಿ. ದಾವಾ ಹೊಲದ ಸ ನಂ 280 ಇದ್ದು ಅದರ ಒಟ್ಟು ವಿಸ್ತೀರ್ಣ 07 ಎಕರೆ 22 ಗುಂಟೆ ಇರುತ್ತದೆ. ಪ್ರತಿವಾದಿಯರಿಗೆ 2-00 ಎಕರೆ ಮತ್ತು 1-00 ಎಕರೆ ಜಮೀನು ಮಾರಾಟ ಮಾಡಿದ ಮೇಲೆ 18 ಗುಂಟೆ ಜಮೀನನ್ನು ಪ್ಲಾಟ್ ಮಾಡಿ ಮಾರಾಟ ಮಾಡಿರುತ್ತೇವೆ. ಪ್ಲಾಟುಗಳನ್ನು ಭೂ ಪರಿವರ್ತನೆ ಮಾಡಿರುವುದಿಲ್ಲ ಗುಂಟೆ ಲೆಕ್ಕದಲ್ಲಿ ಪ್ಲಾಟ್‌ಗಳನ್ನು ಕ್ರಯಪತ್ರ ಮಾಡಿಕೊಟ್ಟಿರುತ್ತೇವೆ. ಪ್ಲಾಟುಗಳನ್ನು ಭೀಮನಗೌಡ ತಂದೆ ಸಿದ್ದಪ್ಪ ಇವರಿಗೆ 3 ಗುಂಟೆ, ಆದಪ್ಪ ತಂದೆ ಪಿಡ್ಡಪ್ಪ ಇವರಿಗೆ 3 ಗುಂಟೆ, ಸದ್ದಾಂಹುಸೇನ ತಂದೆ ಪೀರಸಾಬ ಇವರಿಗೆ 3 ಗುಂಟೆ, ಸೋಮಣ್ಣ ತಂದೆ ಭೀಮಪ್ಪ ಇವರಿಗೆ 3 ಗುಂಟೆ, ಖಾಜಾಹುಸೇನ ತಂದೆ ಇಮಾಮಸಾಬ ಇವರಿಗೆ 3

ಗುಂಟೆ,, ಮಗದುಮನಾಯ್ಕ ತಂದೆ ಜಿಂದಾನಾಯಕ ಇವರಿಗೆ 1 ಗುಂಟೆ, , ಹನುಮಂತಿ ಗಂಡ ಹೊನಗೂಡೆಪ್ಪ ಇವರಿಗೆ 1 ಗುಂಟೆ, , ಮೌಲಮ್ಮ ಗಂಡ ಖಾಸಿಂಸಾಬ ಇವರಿಗೆ 1 ಗುಂಟೆ, ಮೇಲೆ ಹೇಳಿದವರು ಮನೆ ಕಟ್ಟುವ ಸಲುವಾಗಿ ಪ್ಲಾಟುಗಳನ್ನು ಖರೀದಿ ಮಾಡಿ ಅವರ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಇವರೆಲ್ಲರ ಮನೆಗಳು ಒಂದೇ ಕಡೆ ಇರುವುದಿಲ್ಲ ಸ್ವಲ್ಪ ಜಾಗ ಬಿಟ್ಟು ಬಿಟ್ಟು ಇರುತ್ತವೆ. ಮೇಲೆ ಹೇಳಿದವರನ್ನು ಹೊರತುಪಡಿಸಿ ಬೇರೆಯವರಿಗೂ ಗುಂಟೆ ಲೆಕ್ಕದಲ್ಲಿ ಪ್ಲಾಟುಗಳನ್ನು ನೋಂದಣಿ ಮಾಡಿಸದೆ ಹಾಗೆ ಕೊಟ್ಟಿರುತ್ತೇನೆ. ನೋಂದಣಿ ಮಾಡಿಸದೇ ಹಾಗೆ ಪ್ಲಾಟುಗಳು ಕೊಟ್ಟಿರುವವರು ಸಹ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಎಷ್ಟು ಜನರಿಗೆ ನೋಂದಣಿ ಮಾಡಿಸದೆ ಹಾಗೆ ಪ್ಲಾಟುಗಳನ್ನು ಕೊಟ್ಟು ಅವರು ಮನೆ ಕಟ್ಟಿಕೊಂಡವರ ಹೆಸರುಗಳನ್ನು ಹೇಳಲು ಸೂಚಿಸಿದ್ದು, ಸಾಕ್ಷಿಯು ನನಗೆ ಅವರ ಹೆಸರು ನೆನಪಿಲ್ಲ ಎನ್ನುತ್ತಾರೆ. ಸಾಕ್ಷಿಗೆ ಹುಸೇನಸಾಬ ತಂದೆ ಖಾಸಿಂಸಾಬ, ರೇಷ್ಮಾ ತಂದೆ ಇಮಾಮಸಾಬ, ಖಾಜಾಸಾಬ ತಂದೆ ಜೂಕೆಸಾಬ, ಖಾಸಿಂಬಿ ತಂದೆ ಖಾದರಸಾಬ, ಅಕಬರ್ ತಂದೆ ಅಬ್ದುಲ್‌ಸಾಬ, ಮಹಿಮೂದ್ ತಂದೆ ಅಬ್ದುಲ್ ಸಾಬ, ಜುಬಲೇಸಾಬ ತಂದೆ ಇಮಾಮಸಾಬ, ಖಾಜಾಸಾಬ ತಂದೆ ಇಮಾಮಸಾಬ , ಮಹ್ಮದ ತಂದೆ ಇಮಾಮಸಾಬ, ಮೌಲಾಸಾಬ ತಂದೆ ಇಮಾಮಸಾಬ, ಪೀರಸಾಬ ತಂದೆ ಖಾಸಿಂಸಾಬ, ಮಹಾಬಲಿಸಾಬ ತಂದೆ ಖಾಸಿಂಸಾಬ, ಮಲ್ಲಪ್ಪ ತಂದೆ ಭೀಮಪ್ಪ, ಶಿವಪ್ಪ ತಂದೆ ಭೀಮಪ್ಪ, ಭೀಮಪ್ಪ ತಂದೆ ಸೋಮಣ್ಣ, ಖಾಸಿಂಅಲಿ ತಂದೆ ಖಾದರಸಾಬ, ಬಸನಗೌಡ ತಂದೆ ಪಿಡ್ಡನಗೌಡ, ಸೂಗಪ್ಪ ತಂದೆ ಗುರಣ್ಣ, ಮಲ್ಲಪ್ಪ ತಂದೆ ಗುರಣ್ಣ, ಭೀಮರಾಯ ತಂದೆ ಹೊನಗೂಡೆಪ್ಪ ಕುರಿ, ಬಸವರಾಜ ತಂದೆ ಹೊನಗೂಡೆಪ್ಪ ಕುರಿ, ಬಾಲೇಸಾಬ ತಂದೆ ರಸೂಲಸಾಬ, ರಸೂಲಸಾಬ ತಂದೆ ಅಲ್ಲಿಸಾಬ, ಯಲ್ಲಪ್ಪ ತಂದೆ ಸಿದ್ದಣ್ಣ, ಭೀಮರಾಯ ತಂದೆ ಸಿದ್ದಣ್ಣ, ಸಣ್ಣ ಭೀಮರಾಯ ತಂದೆ ಸಿದ್ದಣ್ಣ, ಮಲ್ಲಪ್ಪ ತಂದೆ ಸಿದ್ದಣ್ಣ, ಅಯ್ಯಪ್ಪ

ತಂದೆ ಸಿದ್ದಣ್ಣ, ಪೀರಾಸಬ ತಂದೆ ದೊರೆನಾಯ್ಕ, ಮಹಾಬಲಿ ತಂದೆ ದೊರೆನಾಯ್ಕ, ನಾಗಪ್ಪ ತಂದೆ ಸಿದ್ದಣ್ಣ ಇವರೆಲ್ಲರಿಗೂ ನೀವು ನೋಂದಣಿ ಮಾಡದೆ ಪ್ಲಾಟುಗಳನ್ನು ಮಾರಾಟ ಮಾಡಿದ್ದು ಅವರು ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿ. ದಾವಾ ಜಮೀನಿನಲ್ಲಿ ನನ್ನ ಮನೆ ಇರುತ್ತದೆ ಎಂದರೆ ಸರಿ. ಈಗ ಮೇಲೆ ಹೇಳಿದ ಎಲ್ಲಾ ಖರೀದಿದಾರರು ತಮ್ಮ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಮತ್ತು ಅವರಿಗೆ ರಸ್ತೆ ಮತ್ತು ಲೈಟ್ ಕಂಬದ ವ್ಯವಸ್ಥೆ ದಾವಾ ಜಮೀನಿನಲ್ಲಿದೆ ಎಂದರೆ ಸರಿ. ದಾವಾ ಜಮೀನಿನಲ್ಲಿ ಒಂದು ಮಸೀದಿ ಇದೆ ಎಂದರೆ ಸರಿ. ದಾವಾ ಜಮೀನಿನಲ್ಲಿ ಬಸವಣ್ಣನ ದೇವಸ್ಥಾನ ಇದೆ ಎಂದರೆ ಸರಿ. ಮೇಲೆ ಹೇಳಿದ ಎಲ್ಲಾ ಖರೀದಿದಾರರು ದಾವಾ ಜಮೀನಿನಲ್ಲಿ ಮನೆಕಟ್ಟಿಕೊಂಡು ವಾಸ ಮಾಡಿಕೊಂಡಿರುತ್ತಾರೆಂದರೆ ಸರಿ. ಮೇಲೆ ಹೇಳಿದ ಖರೀದಿದಾರರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ.

3. 1ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ನಿ ಪಿ 1 ರಂತೆ ಹಾಜರುಪಡಿಸಿದ್ದೇನೆ. ನಿ ಪಿ 1 ರಂತೆ ನಿಮ್ಮ ತಂದೆ ರಾಜಬಲಿ 1ನೇ ಪ್ರತಿವಾದಿಗೆ ಕ್ರಯಪತ್ರವನ್ನು ಮಾಡಿಕೊಟ್ಟಿರುವುದನ್ನು ನೀವೆ ಹಾಜರುಪಡಿಸಿದ್ದೀರಿ ಎಂದರೆ ಸರಿ. ನಿ ಪಿ 1 ರಲ್ಲಿ ಮಾರಾಟಗಾರರಾಗಿ ನಿಮ್ಮ ತಂದೆಯವರ ಸಹಿ ಇದೆ ಎಂದರೆ ಸರಿ. 3ನೇ ಸಾಕ್ಷಿದಾರರಾಗಿ ನಿಮ್ಮ ಸಹಿ ಇದೆ ಎಂದರೆ ಸರಿ. ಸಾಕ್ಷಿದಾರರು ಸದರಿ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿ ಪಿ 1(ಎ) ಮತ್ತು 1(ಬಿ) ಎಂದು ಗುರುತಿಸಲಾಯಿತು. ನಿ ಪಿ 1 ರಲ್ಲಿ 1ನೇ ಪ್ರತಿವಾದಿಗೆ ಮಾರಾಟ ಮಾಡಿದ ಜಮೀನಿನ ಚಕ್‌ಬಂದಿ, ಪೂರ್ವಕ್ಕೆ ಪ್ಲಾಟಗಳು, ಪಶ್ಚಿಮಕ್ಕೆ ಹಳ್ಳ, ಉತ್ತರಕ್ಕೆ ಇದೇ ಸರ್ವೆ ನಂಬರ್ ನಲ್ಲಿ ಉಳಿದ ಹೊಲ, ದಕ್ಷಿಣಕ್ಕೆ ಮಾರ್ಗ ಎಂದು ನಮೂದು ಮಾಡಿದ್ದಾರೆಂದರೆ ಸರಿ.

4. 2ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ನಿ ಪಿ 3 ರಂತೆ ಹಾಜರುಪಡಿಸಿದ್ದೇನೆ. ನಿ ಪಿ 3 ರಂತೆ ನಿಮ್ಮ ತಂದೆ ರಾಜಬಲಿ 2ನೇ ಪ್ರತಿವಾದಿಗೆ ಕ್ರಯಪತ್ರವನ್ನು ಮಾಡಿಕೊಟ್ಟಿರುವುದನ್ನು ನೀವೆ ಹಾಜರುಪಡಿಸಿದ್ದೀರಿ ಎಂದರೆ ಸರಿ. ನಿ ಪಿ 3 ರಲ್ಲಿ ಮಾರಾಟಗಾರರಾಗಿ ನಿಮ್ಮ ತಂದೆಯವರ ಸಹಿ ಇದೆ ಎಂದರೆ ಸರಿ. 1ನೇ ಸಾಕ್ಷಿದಾರರಾಗಿ ನಿಮ್ಮ ಸಹಿ ಇದೆ ಎಂದರೆ ಸರಿ. ಸಾಕ್ಷಿದಾರರು ಸದರಿ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿ ಪಿ 3(ಎ) ಮತ್ತು 3(ಬಿ) ಎಂದು ಗುರುತಿಸಲಾಯಿತು. ನಿ ಪಿ 3 ರಲ್ಲಿ 2ನೇ ಪ್ರತಿವಾದಿಗೆ ಮಾರಾಟ ಮಾಡಿದ ಜಮೀನಿನ ಚಕ್‌ಬಂದಿ, ಪೂರ್ವಕ್ಕೆ ಇದೆ ಜಮೀನಿನಲ್ಲಿ ಪ್ಲಾಟಗಳು ಮತ್ತು ಮನೆಗಳು, ಪಶ್ಚಿಮಕ್ಕೆ ಸ ನಂ 279, ಉತ್ತರಕ್ಕೆ ವಿಶ್ವನಾಥರಡ್ಡಿ ಇವರ ಹೊಲ, ದಕ್ಷಿಣಕ್ಕೆ ಇದೇ ಸರ್ವೆ ನಂಬರ್ ನಲ್ಲಿ ಅಕಬರಸಾಬ ನ ಭಾಗದ ಹೊಲ ಎಂದು ನಮೂದು ಮಾಡಿದ್ದಾರೆ ಎಂದರೆ ಸರಿ.

5. ನೋಂದಣಿ ಖರೀದಿ ಪತ್ರದ ಪ್ರಕಾರ ಪ್ರತಿವಾದಿಯರು ಅವರ ಹೊಲದ ಮಾಲೀಕರು ಮತ್ತು ಕಬ್ಜಾದಾರರು ಆಗಿರುತ್ತಾರೆ ಎಂದರೆ ಸರಿ. ಪ್ರತಿವಾದಿಯರ ಹೊಲಗಳನ್ನು ಅವರೆ ಬಿತ್ತುವುದುನ್ನು ಬೆಳೆಯುವುದನ್ನು ಸಾಗುವಳಿ ಮಾಡಿಕೊಂಡಿದ್ದಾರೆಂದರೆ ಸರಿ. ಸಾಕ್ಷಿಗೆ ಛಾಯಾ ಚಿತ್ರವನ್ನು ತೋರಿಸಿ ಕಟ್ಟಡ ಕಟ್ಟುತ್ತಿರುವುದು 2ನೇ ಪ್ರತಿವಾದಿಯ ಹೊಲದಲ್ಲಿ ಎಂದು ಸೂಚಿಸಿದ್ದು, ಸಾಕ್ಷಿಯು ಹೌದು ಎನ್ನುತ್ತಾರೆ, ಹಿಂದೆ ಇರುವ ಮನೆಗಳು ನಿಮ್ಮ ಜಾಗದಲ್ಲಿ ಇವೆ ಮತ್ತು ಅದರ ಮುಂದೆ ಇರುವ ಸಾಗುವಳಿ ಜಮೀನು 1ನೇ ಪ್ರತಿವಾದಿಯದು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಛಾಯಾ ಚಿತ್ರವನ್ನು ನೋಡಿ ಸಾಕ್ಷಿಯು ಗುರುತಿಸಿದ್ದರಿಂದ ನಿ ಡಿ 1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಛಾಯಾ ಚಿತ್ರವನ್ನು ತೋರಿಸಿ ಕಟ್ಟಡ ಕಟ್ಟುತ್ತಿರುವುದ 2ನೇ ಪ್ರತಿವಾದಿಯದು ಮತ್ತು ಅದರ ಪಕ್ಕದಲ್ಲಿರುವ ಬದುವಿನ ಪಕ್ಕದಲ್ಲಿ ಇರುವ ಹೊಲ 1ನೇ ಪ್ರತಿವಾದಿಯದು ಎಂದು ಸೂಚಿಸಿದ್ದು

ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಛಾಯಾ ಚಿತ್ರವನ್ನು ನಿ ಡಿ 2 ಎಂದು ಗುರುತಿಸಲಾಯಿತು. ಪ್ರತಿವಾದಿಯರಿಗೆ ಖರೀದಿ ಪ್ರಕಾರ ಕೊಟ್ಟಿರುವ ಜಮೀನುಗಳ ಪೂರ್ವ ದಿಕ್ಕಿಗೆ ನಿಮ್ಮ ಜಮೀನು ಬರುತ್ತದೆ ಎಂದರೆ ಸರಿ. ಆ ಪೂರ್ವ ದಿಕ್ಕಿಗೆ ಇರುವ ನಿಮ್ಮ ಜಮೀನಿನಲ್ಲಿ ನೀವು ನೋಂದಣಿ ಮಾಡಿದ ಮತ್ತು ನೋಂದಣಿ ಮಾಡಿಸದೆ ಇರುವವರು ತಮ್ಮ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡಿಕೊಂಡಿದ್ದಾರೆಂದರೆ ಸರಿ. 2ನೇ ಪ್ರತಿವಾದಿಯು ತನ್ನ ಜಮೀನಿನಲ್ಲಿ ಕಟ್ಟುತ್ತಿರುವ ಮನೆಯ ಪೂರ್ವ ದಿಕ್ಕಿಗೆ ನಿಮ್ಮ ಜಮೀನಿಗೆ ಹತ್ತಿಕೊಂಡು ಯಾರು ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಹುಸೇನಸಾಬ ತಂದೆ ಖಾಸಿಂಸಾಬ, ಖಾಜಾಸಾಬ ತಂದೆ ಜೂಕೆಸಾಬ ಇವರ ಮನೆಗಳು ಇರುತ್ತವೆ. 1ನೇ ಪ್ರತಿವಾದಿಯು ತನ್ನ ಜಮೀನಿನಲ್ಲಿ ಕಟ್ಟುತ್ತಿರುವ ಮನೆಯ ಪೂರ್ವ ದಿಕ್ಕಿಗೆ ನಿಮ್ಮ ಜಮೀನಿಗೆ ಹತ್ತಿಕೊಂಡು ಯಾರು ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎಂದರೆ ಸಾಕ್ಷಿಯು ರೇಷ್ಮಾ ತಂದೆ ಇವರಿಗೆ ಖಾಲಿ ಜಾಗ ಕೊಟ್ಟಿರುತ್ತೇನೆ. ಖಾಸಿಂಬಿ ತಂದೆ ಖಾದರಸಾಬ ಇವರಿಗೆ, ಅಕಬರಸಾಬ ತಂದೆ ಅಬ್ದುಲಸಾಬ ಇವರಿಗೆ ಸೇರಿದ ಮನೆಗಳು ಇರುತ್ತವೆ. ಪ್ರತಿವಾದಿ ನಂಬರ್ 1 ಮತ್ತು 2 ರವರ ಹೊಲಗಳ ಪೂರ್ವ ದಿಕ್ಕಿಗೆ ಮನೆಗಳು ಮತ್ತು ಪ್ಲಾಟುಗಳು ಇರುವುದರಿಂದ ಅಲ್ಲಿ ಸಾಗುವಳಿ ಜಮೀನು ಇರುವುದಿಲ್ಲ ಎಂದರೆ ಸರಿ.

6. ದಾವಾ ಜಮೀನಿನಲ್ಲಿ ನೋಂದಣಿ ಮಾಡಿಸದೆ ಮಾರಾಟ ಮಾಡಿರುವವರಿಗೆ ಎಷ್ಟು ಎಷ್ಟು ಗುಂಟೆ ಜಮೀನು ಹೋಗಿ ಎಷ್ಟು ಜಮೀಓನು ಉಳಿದಿದೆ ಎಂದು ಸೂಚಿಸಿದ್ದು ಸಾಕ್ಷಿಯು ನನಗೆ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ದಾವಾ ಜಮೀನಿಲ್ಲಿ ಪ್ಲಾಟ್ ಮತ್ತು ಮನೆಗಳನ್ನು ಕಟ್ಟಿಕೊಂಡಿರುವವರಿಗೆ ನನ್ನ ಜಮೀನಿನಲ್ಲಿ ರಸ್ತೆ ಹೋಗಿದೆ ಎಂದರೆ ಸರಿ. ನಿಮ್ಮ ಜಮೀನಿನಲ್ಲಿ ಪ್ಲಾಟುಗಳು, ಮನೆಗಳು, ರಸ್ತೆ ಮತ್ತು ದೇವಸ್ಥಾನ, ಮಸೀದಿ ಇರುವುದರಿಂದ ಅದರಲ್ಲಿ ಸಾಗುವಳಿ ಜಮೀನು ಇರುವುದಿಲ್ಲ ಎಂದರೆ ಸಾಕ್ಷಿಯು

ಸ್ವಲ್ಪ ಸಾಗುವಳಿ ಜಮೀನು ಇದೆ ಎನ್ನುತ್ತಾರೆ ಸಾಕ್ಷಿ ಮುಂದುವರಿದು 1ವರೆ ಎಕರೆ ಸಾಗುವಳಿ ಜಮೀನು ಇದೆ ಎನ್ನುತ್ತಾರೆ. ಈ ಮೇಲೆ ಹೇಳಿದ ವಿಷಯವನ್ನು ನಿಮ್ಮ ವಾದ ಪತ್ರದಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿದ್ದಿರಾ ಎಂದರೆ ಸಾಕ್ಷಿಯು ಮೇಲೆ ಹೇಳಿದ ಯಾವುದೇ ವಿಷಯ ಬರೆಸಿಲ್ಲ ಎನ್ನುತ್ತಾರೆ. ನಿಮ್ಮ ವಾದ ಪತ್ರದಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ದಾವಾ ಜಮೀನಿನಲ್ಲಿ ಮನೆ ಕಟ್ಟಿಕೊಂಡಿರುವುದು ಮತ್ತು ರಸ್ತೆ ಇರುವ ವಿಷಯ ಬರೆಸಿಲ್ಲ ಎಂದರೆ ಸರಿ. 1ನೇ ಪ್ರತಿವಾದಿಯು ಖರೀದಿ ಮಾಡಿದ 2-00 ಎಕರೆ ಜಮೀನು, 2ನೇ ಪ್ರತಿವಾದಿ ಖರೀದಿ ಮಾಡಿದ 1-00 ಎಕರೆ ಜಮೀನಿಗೂ ದಾವಾ ಜಮೀನಿಗೂ ಏನೂ ಸಂಬಂಧ ಇಲ್ಲ ಎಂದರೆ ಸರಿ.

7. ಪ್ರತಿವಾದಿಯರ ವಿರುದ್ದ ದಾವಾ ಹೊಲ ಒತ್ತುವರಿಯಾಗಿದೆ ಎಂದು ಸಲ್ಲಿಸಿರುತ್ತೇನೆ. ದಾವಾ ಹೊಲ ಒತ್ತುವರಿಯಾಗಿದೆ ಎಂದು ಸರ್ವೆ ಮಾಡಿಸಿ ಎಷ್ಟು ಒತ್ತುವರಿಯಾಗಿದೆ ಎಂದು ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಈಗ್ಗೆ 2 ವರ್ಷದ ಹಿಂದೆ ಸರ್ವೆ ಮಾಡುವವರು ಬಂದು ವಾಪಸ್ಸು ಹೋಗಿರುತ್ತಾರೆ. ಅದಕ್ಕೆ ಪ್ರತಿವಾದಿಯರು ಬೇಡ ಎಂದು ತಕರಾರು ಮಾಡಿರುತ್ತಾರೆ. ನಿಮ್ಮ ವಾದ ಪತ್ರದಲ್ಲಿ ಇದೇ ಕಾರಣವನ್ನು ತೋರಿಸಿ ವಾದ ಪತ್ರ ಸಲ್ಲಿಸಿದ್ದಿರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಹೇಳಿರುವ ಕಾರಣವನ್ನು ವಾದ ಪತ್ರದಲ್ಲಿ ತೋರಿಸಿಲ್ಲ ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ನಿಮ್ಮ ಜಮೀನಿನ ಪೂರ್ವ ದಿಕ್ಕಿಗೆ ಪ್ಲಾಟುಗಳು ಮತ್ತು ಜಮೀನುಗಳು ಇರುವುದರಿಂದ ಅಲ್ಲಿ ಸಾಗುವಳಿ ಜಮೀನುಗಳು ಇರುವುದಿಲ್ಲ ಅಲ್ಲಿ ಪ್ರತಿವಾದಿಯರು ಒತ್ತುವರಿ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡಬೇಕಂಬ ಉದ್ದೇಶದಿಂದ ಸುಳ್ಳು ದಾವೆ

ಸಲ್ಲಿಸಿದ್ದಿರಿ ಎಂದರೆ ಸರಿಯಲ್ಲ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ